

ನಿನ್ನ ನೆರಳಲ್ಲಿ ನಾನು ನಿಂತು ನಿನಗೇ ಕೊಡೆ ಹಿಡಿಯುತ್ತಿದ್ದೇನೆ ಎನ್ನುವುದು ಎಷ್ಟು ವಿಚಿತ್ರ!

ಡಾ.ವಿನೋದ ಛೆಬ್ಬಿ

# 23: ಆಶ್ರಿತರಾರು?

ಹೋದ ಸಲ ಸಹಾವಲಂಬನೆಯ ಬಗೆಗೆ ಮಾತಾಡುತ್ತಿದ್ದೆವು. ಸಹಾವಲಂಬಿಗಳ ಇನ್ನೊಂದು ಗುಣವೆಂದರೆ ಬೇಡವೆಂದರೂ ಮೇಲೆ ಬಿದ್ದು ಸಹಾಯ ಮಾಡುವುದು, ನಂತರ ತನ್ನ ಬಗೆಗೆ ಮೆಚ್ಚಿಗೆಯ ಮಾತು ನಿರೀಕ್ಷಿಸಿ, ಅದು ಬರುವಾಗ ತನ್ನ ಕಾಲಿಗೆ ತಾನೇ ನಮಸ್ಕರಿಸುವುದು. ಇದು ಕೆಲವೊಮ್ಮೆ ಬಹಳ ಸೂಕ್ಷ್ಮವಾಗಿಯೂ ಕಂಡುಬರಬಹುದು. ಉದಾಹರಣೆಗೆ, ನನಗೆ ಗೊತ್ತಿರುವ ಆಪ್ತಸಲಹೆಗಾರ್ತಿಯ ಗಂಡ ಕೈತುಂಬ ಗಳಿಸುತ್ತಾನೆ. ಹೆಂಡತಿ ಸ್ವಂತಕ್ಕೆ ಹಣ ಕೇಳಿದಾಗಲೆಲ್ಲ ಗಂಡ ತಗೋ ಎನ್ನುತ್ತ ಚಾಚಿದ ಕೈಯಲ್ಲಿ ಹಣ ಹಿಡಿದುಕೊಂಡು, ಯಾಕೆ ಬೇಕಾಗಿತ್ತು ಎಂದು ಕುತ್ಸಿತ ವಿವರ ಕೇಳುತ್ತಾನೆ. ಪೂರ್ತಿ ಮನವರಿಕೆ ಆಗದ ಹೊರತೂ ಹಣ ಕೈದಾಟುವುದಿಲ್ಲ. ನಂತರ, ಎಷ್ಟಾದರೂ ಕೇಳು ಕೊಡುತ್ತೇನೆ ಎಂದು ಮತ್ತೆ ಧಾರಾಳಿಯಾಗುತ್ತಾನೆ. ಯಾವೊತ್ತೂ ಸ್ವಲ್ಪ ಹಣ ಅವಳ ಖರ್ಚಿಗೆಂದು ಕೊಟ್ಟು ಮರೆತುಬಿಡುವ ಪ್ರಯತ್ನ ಮಾಡಿಲ್ಲ! ಗಂಡನ ಕೈಯಲ್ಲಿ ಹಣ ಇರುವ ತನಕ ತಾನು ಭಿಕ್ಷುಕಿ ಎಂದು ಅನಿಸುತ್ತದೆ ಎಂದು ಹೆಂಡತಿಯ ವ್ಯಥೆ.

ಸಹಾವಲಂಬಿಗಳ ಸಹಾಯವನ್ನು ನೀವು ಬೇಡವೆಂದರೆ ಏನಾಗುತ್ತದೆ? ನಿಮ್ಮ ಸ್ವಾವಲಂಬನೆಯನ್ನು ಮೆಚ್ಚುವುದರ ಬದಲು ತಮ್ಮನ್ನು ತಿರಸ್ಕರಿಸಿದ್ದುದರ ಬಗೆಗೆ ಅಸಮಾಧಾನ ಹೊಂದುತ್ತಾರೆ. ನೀವವರ ನಿಷ್ಠೆಯನ್ನು ನಂಬಲಿಲ್ಲ ಎಂದು ಮುಖ ಮುರಿದುಕೊಂಡು ನಿಮ್ಮಿಂದ ವಿಮುಖರಾಗುತ್ತಾರೆ. ಈ ಸ್ವಭಾವ ಮೈವೆತ್ತಂತೆ ನನ್ನ ವೈದ್ಯಮಿತ್ರ. ಅವನ ಕಾಯಂ ರೋಗಿಗಳು ಬಹಳ ದಿನಗಳಿಂದ ಕಾಣದಿದ್ದಾಗ ಇವನು ಅವರಿಗೆ ಕರೆಮಾಡಿ ಹಿತಚಿಂತನೆ ವಿಚಾರಿಸುತ್ತಿದ್ದ. ಅವರು ಸ್ವಲ್ಪವಾದರೂ ಅನಾರೋಗ್ಯದಿಂದ ಇದ್ದರೆ ತಕ್ಷಣ ಬರಬೇಕೆಂದೂ, ಇಲ್ಲವಾದರೆ ಅದು ಹೆಚ್ಚಾಗಬಹುದೆಂದೂ ಸೂಚಿಸುತ್ತಿದ್ದ. (ಯಾಕೆ? ಅವರ ಕಾಯಿಲೆ ಇವನ ಚಿಕಿತ್ಸೆ ಇಲ್ಲದೆ ಗುಣವಾದರೆ?) ಒಂದುವೇಳೆ ಸ್ವಸ್ಥರಾಗಿ ಇದ್ದೇವೆಂದರೆ, 'ಚೆನ್ನಾಗಿದ್ದೀರಾ, ಸಂತೋಷ. ಆದರೆ ಇತ್ತೀಚಿನ ಹವಾಮಾನದಿಂದ ನಿಮ್ಮ ಕಾಯಿಲೆ ವಕ್ರಿಸಿಕೊಳ್ಳಬಹುದು, ಜಾಗ್ರತೆ!' ಎನ್ನುತ್ತಿದ್ದ. ಎರಡೇ ದಿನಗಳಲ್ಲಿ ಆ ರೋಗಿಗಳು ಇವನ ಕ್ಲಿನಿಕ್‌ನಲ್ಲಿ ಹಾಜರ್! ಇನ್ನು ಯಾರಾದರೂ ಬೇರೆ ವೈದ್ಯರ ಬಳಿ ಹೋದರೆಂದು ಗೊತ್ತಾದರೆ ಅವರು ತನ್ನನ್ನು ಮೋಸಮಾಡಿ ಕೈಬಿಟ್ಟರೆಂದು ಶಪಿಸುತ್ತಿದ್ದ. ಅವರು ಮರಳಿ ಬಂದರೆ ಆ ವೈದ್ಯನ ಹತ್ತಿರವೇ ಹೋಗಿ ಸಾಯಿರಿ ಎಂದು ಹೊರಗಟ್ಟುತ್ತಿದ್ದ. ವಿಚಿತ್ರವೆಂದರೆ ಅವನು ಯಾವೊತ್ತೂ ಹಣಕ್ಕಾಗಿ ಒತ್ತಾಯಿಸದೆ ರೋಗಿಗಳು ಕೊಟ್ಟಷ್ಟೇ ತೆಗೆದುಕೊಳ್ಳುತ್ತಿದ್ದ!

ನಿನ್ನ ಅವಲಂಬನೆಯ ನೆರಳಲ್ಲಿ ನನ್ನ ಅವಲಂಬನೆಯಿದೆ, ನೀನು ಸರಿದರೆ ನನಗೂ ನೆರಳು ಇಲ್ಲವಾಗುತ್ತದೆ ಎನ್ನುವುದು ಸಹಾವಲಂಬಿಗಳ ಮನದಾಳ. ಹೀಗೆ ಮನೋಲಾಭ (psychological advantage) ಪಡೆದುಕೊಳ್ಳುವಾಗ ಸಂಬಂಧಗಳು ಹುಳಿಯಾಗುವ ಸಾಧ್ಯತೆಯಿದೆ. ಇದಕ್ಕೊಂದು ದೃಷ್ಟಾಂತ:

ನನ್ನ ಸ್ನೇಹಿತನೊಬ್ಬ ಆಫೀಸು ಇಟ್ಟುಕೊಂಡಿದ್ದಾನೆ. ಅವನ ಸಹಾಯಕಿ ಕೆಲಸ ಬಿಟ್ಟಾಗ ಅವನ ಹೆಂಡತಿ ತಾನೇ ಮುಂದೆ ಬಂದು ಆಫೀಸು ನೋಡಿಕೊಳ್ಳಲು ಆರಂಭಿಸಿದಳು. ಆಗ ಗಂಡ ಆಫೀಸಿನ ಆರ್ಥಿಕ ವ್ಯವಹಾರವನ್ನು ಸಮರ್ಪಕವಾಗಿ ನಿರ್ವಹಿಸದಿರುವುದು ಕಂಡುಬಂತು. ಅವಳೇ ಜವಾಬ್ದಾರಿ ಹೊತ್ತು, ಸೋರಿಹೋಗುವ ಹಣವನ್ನು ತಡೆಗಟ್ಟಿದಳು. ಎರಡು ವರ್ಷದ ನಂತರ ಮಗಳ ಮದುವೆಗೆಂದು ಆಕೆ ಆಫೀಸಿನ ಕೆಲಸ ಬಿಡುತ್ತ, ಇನ್ನೊಬ್ಬ ಸಹಾಯಕಿಯನ್ನು ನೇಮಕ ಮಾಡಿದಳು. ಒಂದುದಿನ ಆ ಸಹಾಯಕಿ ತುರ್ತು ಕಾರಣದಿಂದ ರಜೆ ಹಾಕಿದಾಗ ಗಂಡ ಇವಳ ಸಹಾಯ ಕೇಳಿದ. ಇವಳು ತಕ್ಷಣ ತಯಾರಾದಳು. ಇಬ್ಬರೂ ಕಾರಿನಲ್ಲಿ ಧಾವಿಸುವಾಗ ಅವಳು ಹೇಳಿದ್ದು: 'ನೋಡಿದಿರಾ, ನಾನು ನಿಮಗೆಷ್ಟು ಮುಖ್ಯ ಎಂದು ನಿಮಗೆ ಗೊತ್ತಾಯಿತಲ್ಲ, ಇನ್ನಾದರೂ ನನ್ನ ಬೆಲೆ ಅರ್ಥಮಾಡಿಕೊಳ್ಳಿ!' ಈ ಮಾತು ಅವನನ್ನು ನೇರವಾಗಿ ಚುಚ್ಚಿತು. ಯಾಕೆಂದರೆ ಅವನು ಕೆಲಸಕ್ಕೆ ಸಂಬಳ ಕೊಟ್ಟಿದ್ದಷ್ಟೇ ಅಲ್ಲ, ಆಕೆಯ ಆರ್ಥಿಕ ನಿರ್ವಹಣಾ ಸಾಮರ್ಥ್ಯವನ್ನು ಶ್ಲಾಘಿಸಿ ಬೋನಸ್ಸನ್ನೂ ಕೊಟ್ಟಿದ್ದ! ಅಂದಿನಿಂದ ಹೆಂಡತಿಯನ್ನು ದೂರವಿಟ್ಟು ಆಫೀಸು ನಡೆಸಲು ನಿರ್ಧರಿಸಿ, ಅವಳೊಂದಿಗೆ ಆಫೀಸಿನ ಬಗೆಗೆ ಮಾತಾಡುವುದನ್ನೇ ನಿಲ್ಲಿಸಿದ. ಆಕೆ ಕೇಳಿದರೂ ಮುಗುಮ್ಮಾಗಿ ಉತ್ತರ ಕೊಟ್ಟು, ತನಗೆ ಹಂಚಿಕೊಳ್ಳುವುದರಲ್ಲಿ ಮನಸ್ಸಿಲ್ಲ ಎಂದು ತೋರಿಸುತ್ತಿದ್ದ. ಆಗ ಆಕೆ ತಳಮಳಿಸುತ್ತಿದ್ದಳು. ಸ್ವಲ್ಪ ಕಾಲದ ನಂತರ ಅವರ ಮಗನೂ ಭಾಗೀದಾರನಾಗಿ ಅಪ್ಪನ ಜೊತೆ ಸೇರಿದ. ಅಷ್ಟೊತ್ತಿಗೆ ವ್ಯವಹಾರ ಬೆಳೆದು ಸ್ವಂತ ಕಟ್ಟಡಕ್ಕೋಸ್ಕರ ನಿವೇಶನ ಖರೀದಿಸಲು ಇಬ್ಬರೂ ಚಿಂತನೆ ನಡೆಸಿದರು. ಇದು ಮಗನಿಂದ ಗೊತ್ತಾಗಿದ್ದೇ ತಡ, ಆಕೆ ಜಾಹೀರಾತುಗಳಲ್ಲಿ ಬಂದ ಹತ್ತಾರು ನಿವೇಶನಗಳ ಪ್ರಸ್ತಾವ ತಂದು ಮಗನ ಮೇಲೆ ಹೇರುತ್ತ ಅವನ ಮೂಲಕ ಗಂಡನನ್ನು ಮಾತಾಡಿಸಲು ಹೆಣಗಿದಳು. ಇಲ್ಲಿ ಆಕೆಯ ಕೃತ್ಯದ ವ್ಯಾವಹಾರಿಕ ಮಹತ್ವ ಏನೇ ಇರಲಿ, ಗಂಡನಿಗೆ ಬೇಡವಾದರೂ ಸುತ್ತುಬಳಸಿ ಒತ್ತಾಯ ತರುವ ರೀತಿಯನ್ನು ನೋಡಿದರೆ ಅವಳು ಸಹಾವಲಂಬಿಯಾಗಲು ಯತ್ನಿಸುವುದು, ಗಂಡ ದೂರೀಕರಿಸಿದಾಗ ಹತಾಶಳಾಗುವುದು ಎದ್ದುಕಾಣುತ್ತಿತ್ತು. ಇದು, 'ನಾನು ನಿನಗಿಂತಲೂ ಉತ್ತಮ ಎಂದು ಸಾಧಿಸಲು ಅವಕಾಶಕೊಡು' ಎಂದೇ ವಿನಾ ಪ್ರಾಮಾಣಿಕ ಸಹಾಯಹಸ್ತವಲ್ಲ– ಒಂದು ವೇಳೆ ಹಾಗಿದ್ದಲ್ಲಿ ಆಕೆ ಸಹಾಯ ಬೇಕಾದರೆ ನಾನಿದ್ದೇನೆ ಎಂದು ಗಂಡನಿಗೆ ಹೇಳಿ ನಿರಾಳವಾಗಬಹುದಿತ್ತು. ಗಂಡ ಸಹಾಯ ಕೇಳಿದಾಗ ಮಾಡಿ ನಂತರ ತನ್ನ ಪಾಡಿಗೆ ತಾನು ಇರಬಹುದಾಗಿತ್ತು. ಗಂಡ ತನ್ನ ಮೇಲೆ ಅವಲಂಬನೆ ನಿಲ್ಲಿಸಿದುದರಿಂದ ತಾನು ನಿಷ್ಪ್ರಯೋಜಕಳು ಎಂಬ ಭಾವವೇ ಅವಳನ್ನು ಈ ರೀತಿ ವರ್ತಿಸಲು ಪ್ರಚೋದಿಸಿತು!

ಸಹಾವಲಂಬನೆಯ ಛಲ ಕೆಲವೊಮ್ಮೆ ಯಾವ ಮಟ್ಟಕ್ಕೆ ಹೋಗಲು ಸಾಧ್ಯವೆಂದರೆ ಇನ್ನೊಂದು ಉದಾಹರಣೆ ನೆನಪಾಗಿ ಮನಸ್ಸು ಭಾರವಾಗುತ್ತದೆ. ಈತನಿಗೆ ಯಾವೊತ್ತೂ ಹೆಣ್ಣನ್ನು ಕಂಡರೆ ಮರ್ಯಾದೆಯಿಲ್ಲ. ಸಮಯ ಕೂಡಿಬಂದರೆ ಯಾವುದೇ ಹೆಣ್ಣು ಪರಪುರುಷನ ಆಕರ್ಷಣೆಗೆ ಒಳಗಾಗುತ್ತಾಳೆ ಎಂಬುದು ಅವನ ಅಚಲ ನಂಬಿಕೆ. ಅದಕ್ಕಾಗಿ ಪ್ರೀತಿಸಿ ಮದುವೆಯಾದವಳನ್ನು 'ದುಷ್ಟ ಗಂಡುಗಳಿಂದ' ರಕ್ಷಿಸುವುದಕ್ಕಾಗಿ ಸದಾ ಗೃಹಬಂಧನದಲ್ಲೇ ಇಟ್ಟಿದ್ದ. ವಿದ್ಯುತ್ ಬಿಲ್ ಕೊಡುವವನು ಬಂದಾಗ ಆತನಿಂದ ತಾನು ಎಷ್ಟು ದೂರ ನಿಂತಿದ್ದೆ ಎಂದು ಆಕೆ ವಿವರಿಸದ ಹೊರತೂ ಗಂಡನಿಗೆ ಶಾಂತಿ ಇರುವುದಿಲ್ಲ. ಕಾರಿನಲ್ಲಿ ತನ್ನ ಬದಿಗೆ ಕುಳಿತ ಹೆಂಡತಿ ಕಿಟಕಿಯ ಕಡೆಗೆ ತಿರುಗಿದರೆ ಸಾಕು, ಬೀದಿಯಲ್ಲಿ ಹೋಗುವ ಗಂಡುಗಳು ಆಕೆಯ ಮೇಲೆ ಕಣ್ಣುಹಾಕುತ್ತಾರೆ ಎಂದು ಆಕ್ಷೇಪ. ಅಷ್ಟೇಕೆ, ಮಲಗುವ ಕೋಣೆಯನ್ನು ಓರಣಗೊಳಿಸಿದಾಗ, 'ಯಾರೋ ಇಲ್ಲಿ ಮಲಗಿದ್ದು ಅದನ್ನು ಮುಚ್ಚಿಡಲು ವ್ಯವಸ್ಥೆ ಮಾಡಿದ ಹಾಗಿದೆ!' ಎಂದು ವ್ಯಂಗ್ಯ ಚಟಾಕಿ ಹಾರಿಸುತ್ತಿದ್ದ. ಹೆಂಡತಿ ರೋಸಿ ಹುಚ್ಚುಚ್ಚಾಗಿ ಆಡಿದಾಗ ಅವಳ 'ಹುಚ್ಚು' ಸರಿಪಡಿಸಲು ನನ್ನ ಹತ್ತಿರ ಕರೆತಂದ. ನನ್ನ ಚಿಕಿತ್ಸೆಯಿಂದ (ಚಿಕಿತ್ಸೆ ಏನೆಂದು ಮುಂದೆ ನೋಡೋಣ) ಆಕೆ ತನ್ನತನವನ್ನು ಕಂಡುಕೊಳ್ಳಲು ಸಹಾಯವಾಯಿತು. ಆಗ ಆಕೆ ಅನಿಶ್ಚಿತತೆ ಎದುರಿಸಿದರೂ ಸರಿ, ಗಂಡನನ್ನು ಬಿಡಲು ನಿರ್ಧರಿಸಿದಳು. ಹದಿನಾರು ವರ್ಷದ ದಾಂಪತ್ಯದಿಂದ ಸಿಡಿದು, ಸ್ವಂತ ಉದ್ಯೋಗಸ್ಥಳಾಗಿ ಒಂಟಿಯಾಗಿ ವಾಸಿಸತೊಡಗಿದಳು. ಆಗ ಇವನೇನೆಂದ ಗೊತ್ತೆ? 'ನನ್ನ ಸ್ನೇಹಿತನೊಬ್ಬ ಆಕೆಯನ್ನು ಬಲೆಗೆ ಹಾಕಿಕೊಂಡಿರಲೇಬೇಕು. ಇಲ್ಲವಾದರೆ ಅವಳು ಒಂಟಿಯಾಗಿರಲು ಹೇಗೆ ಸಾಧ್ಯ?' ತನ್ನ ಎಂಟು ವರ್ಷದ ಮಗಳು 'ತಾಯಿಯನ್ನು ಸೇರಿ ಕೆಡಬಾರದು' ಎಂದು ತನ್ನಲ್ಲೇ ಇಟ್ಟುಕೊಂಡಿದ್ದಾನೆ. ಒಂದುಕಡೆ ತಾಯ್ತನಕ್ಕಾಗಿ ಹೆಂಡತಿಯು ನ್ಯಾಯಲಯದ ಕಟ್ಟೆ ಹತ್ತುವಂತೆ ಮಾಡಿ, ಇನ್ನೊಂದುಕಡೆ ಮಗಳಿಗೆ ಇನ್ನೊಬ್ಬಳು 'ಒಳ್ಳೆಯ' ತಾಯಿಯನ್ನು ಹುಡುಕುತ್ತಿದ್ದಾನೆ!

ಸಹಾವಲಂಬನೆಯ ಅದಮ್ಯ ಬಯಕೆ ಏನೇನೆಲ್ಲ ಮಾಡಿಸುತ್ತದೆ!

ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಕರೆಮಾಡಿ. ಲೇಖಕರ ವಿಳಾಸ: .www.medisex.org